ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 26॥ UDP/1263/2018-20 || R.NO.50495/91 ॥ ತಾರೀಕು : 07–08–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ತ್ರಾಸಿ–ಮರವಂತೆ ಕಡಲ ತೀರ ರಕ್ಷಣೆಗೆ ಹೊಸ ತಂತ್ರಜ್ಞಾನ



ಭಾರತ ಸರಕಾರದ ಕೋಸ್ಟಲ್ ಮೆನೇಜ್‌ಮೆಂಟ್ ಪ್ರೋಗ್ರಾಂ ಯೋಜನೆಯಡಿಯಲ್ಲಿ ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್ ಆರ್ಥಿಕ ನೆರವಿನಿಂದ ಸುಸ್ಥಿರ ಕರಾವಳಿ ನಿರ್ವಹಣಾ ಕಾಮಗಾರಿ ಆರಂಭಗೊಂಡಿವೆ. ಕೋಸ್ಟಲ್ ಮೆರೈನ್ ಕನ್‌ಸ್ಟ್ರಕ್ಷನ್ ಎಂಡ್ ಇಂಜಿನಿಯರಿಂಗ್ ಲಿಮಿಟೆಡ್ ಕಂಪೆನಿ ಕಡಲ ಕೊರೆತ ತಡೆ ನಿರ್ವಹಣಾ ಕಾಮಗಾರಿಯಲ್ಲಿ ಬಹಳ ಪ್ರಸಿದ್ಧವಾಗಿದ್ದು ಈ ಕಾಮಗಾರಿ ಕೈಗೆತ್ತಿಕೊಂಡಿದೆ. ಮರವಂತೆಯಲ್ಲಿ ಕಳೆದ ಆರು ದಶಕಗಳಿಂದ ಕಡಲ ಕೊರೆತ ತಡೆಗೆ ಸಾವಿರಾರು ಲಾರಿಗಳಷ್ಟು ಕಲ್ಲುಗಳನ್ನು ಸುರಿಯಲಾಗಿದ್ದರೂ, ಇತ್ತೀಚಿನ ವರ್ಷಗಳಲ್ಲಿ ಕಲ್ಲಿನ ಹಾಸು ಹಾಸಿ ಪ್ರಯತ್ನ ನಡೆಸಲಾಗಿದ್ದರೂ ಪೂರ್ಣ ಯಶಸ್ಸು ಸಿಕ್ಕಿರಲಿಲ್ಲ. ಈ ಕಾರಣಕ್ಕೆ ಹೊಸ ತಂತ್ರಜ್ಞಾನ ಮೂಲಕ ಲಂಬವಾಗಿ ತಡೆಗೋಡೆಗಳನ್ನು ನಿರ್ಮಾಣಮಾಡಿ ಮರಳು ಸಮುದ್ರಕ್ಕೆ ಮರಳಿಹೋಗದಂತೆ ತಡೆಯುವ ಪ್ರಯತ್ನ ನಡೆಸಲಾಗುತ್ತಿದೆ.

ಕಡಲ ಕೊರೆತ ನಿವಾರಣೆ ಮತ್ತು ಮರಳು ಸಂರಕ್ಷಣೆ ಪ್ರಕ್ರಿಯೆ ಮೂಲಕ ಪ್ರಾಕೃತಿಕವಾಗಿ ಸಮುದ್ರ ತೀರ ವಿಸ್ತಾರಗೊಳ್ಳುವ ತಂತ್ರಜ್ಞಾನ ಒಳಗೊಂಡ ಯೋಜನೆಯನ್ನು ಸರಕಾರದ ಬಂದರು ಇಲಾಖೆ ಮೂಲಕ ತ್ರಾಸಿ – ಮರವಂತೆಯಲ್ಲಿ ಜಾರಿಗೆ ತರಲಾಗಿದೆ. 83 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ಆರಂಭಗೊಂಡಿದ್ದು , ಏಷ್ಯನ್ ಡೆವಲಪ್‌ಮೆಂಟ್ ಬ್ಯಾಂಕ್ ಯೋಜನೆಗೆ ನೆರವು ನೀಡಿದೆ. ಮುಂಬಯಿ ಮೂಲದ ಕೋಸ್ಟಲ್ ಮೆರೈನ್ ಕನ್‌ಸ್ಟ್ರಕ್ಷನ್ ಆ್ಯಂಡ್ ಎಂಜಿನಿಯರಿಂಗ್ ಲಿ.ಕಂಪೆನಿ ಈ ಕಾಮಗಾರಿ ಕೈಗೆತ್ತಿಕೊಂಡಿದೆ.

ಕಡಲ್ಕೊರೆತ ತಡೆಗೆ ಬಂಡೆಕಲ್ಲುಗಳನ್ನು ಹಾಕುವ ಕಾರ್ಯಕ್ರಮ ಇದುವರೆಗೆ ಪ್ರಚಲಿತದಲ್ಲಿದ್ದು ಇದರಿಂದ ಹೆಚ್ಚೇನೂ ಪ್ರಯೋಜನವಾಗಿಲ್ಲ. ಕಡಲ್ಕೊರೆತ ನಿಯಂತ್ರಿಸುವ ಮೂಲಕ ತೀರದ ಮರಳು ಸ್ವಾಭಾವಿಕವಾಗಿ ತಡೆಯುವ ಮೂಲಕ ತೀರ ಮತ್ತಷ್ಟು ವಿಸ್ತಾರಗೊಳ್ಳುವಂತೆ ಮಾಡುವುದೇ ಕಡಲ ತೀರ ಸಂರಕ್ಷಣೆ ಮತ್ತು ಮರಳು ಪುನರುತ್ಪತ್ತಿ ತಂತ್ರಜ್ಞಾನ. ಈ ತಂತ್ರಜ್ಞಾನದನ್ವಯ ನಿರ್ಮಿಸಲಾಗುತ್ತಿರುವ ಗ್ರಾಯಿನ್ ಅರ್ಥಾತ್ ಬಂಡೆಗಲ್ಲಿನ ತಡೆಗೋಡೆ ಬಹುಮುಖ್ಯ ಪಾತ್ರ ವಹಿಸುತ್ತದೆ.

ಗ್ರಾಯಿನ್‌ಗಳು ಸಂಪೂರ್ಣ ಶಿಲಾಬಂಡೆಗಳಿಂದಲೇ ನಿರ್ಮಾಣಗೊಳ್ಳಲಿವೆ. ಇಲ್ಲಿನ ರಾಷ್ಟ್ರೀಯ ಹೆದ್ದಾರಿಗೆ ಹೆಚ್ಚು ನಿಕಟವಾಗಿರುವಲ್ಲಿ "ಟಿ" ಮಾದರಿಯ 9 ಗ್ರಾಯಿನ್‌ಗಳನ್ನು ಟೆಟ್ರಾಪಾಡ್ ಆಧಾರದ ಮೂಲಕ ರಚಿಸಲಾಗುತ್ತದೆ. ಜಿಯೋ ಟೆಕ್ಸ್‌ಟೈಲ್ಸ್ ಫೈಬರ್ ಬಟ್ಟೆಯನ್ನು ತಳಭಾಗದಲ್ಲಿ ಹಾಸಲಾಗುತ್ತದೆ. ಮರಳು ಜಾರಿ ಹೋಗಿ ಬಂಡೆಗಲ್ಲಿನ ಕಡಲ ಪಾಲಾಗುವುದನ್ನು ಈ ಬಟ್ಟೆ ತಡೆಯುತ್ತದೆ. ಅಲ್ಲದೇ "ತೀರದಲ್ಲಿ ಮರಳು ಪುನರುತ್ಪತ್ತಿಯಾಗಲು ಇದು ಸಹಕರಿಸುತ್ತದೆ. ಪ್ರತೀ ತಡೆಗೋಡೆ ನಡುವೆ 120 ಮೀ. ಅಂತರವಿದ್ದು, ಈ ಸ್ಥಳದಲ್ಲಿ ಮರಳು ಶೇಖರಣೆಯಾಗುತ್ತದೆ. ಗ್ರಾಯಿನ್‌ಗಳ ನಡುವಿನಲ್ಲಿ ಅಲೆಗಳ ಆಟ, ಅಬ್ಬರ ಅಷ್ಟಾಗಿ ನಡೆಯುವುದಿಲ್ಲವಾದ್ದರಿಂದ ತೀರ ವಿಸ್ತರಣೆಯಾಗುತ್ತಾ ಹೋಗುತ್ತದೆ ಎನ್ನುವುದು ಯೋಜನಾ ತಜ್ಞರ ಅಭಿಮತ.

ಕೊಮೆಕೊ ಕಂಪೆನಿಯ ಅಧಿಕಾರಿಗಳು , ತಂತ್ರಜ್ಞರು ಕಳೆದ ವಾರ ಮಾಧ್ಯಮ ಪ್ರತಿನಿಧಿಗಳನ್ನು ಮರವಂತೆ ಸ್ಥಳಕ್ಕೆ ಕರೆಸಿಕೊಂಡು ಅವರಿಗೆ ಕಾಮಗಾರಿಯ ತಾಂತ್ರಿಕ ವಿವರಗಳನ್ನು ನೀಡಿದರು. ಈ ಬಗೆಯ ಪದ್ಧತಿಯಿಂದ ಕಡಲಕೊರೆತ ತಡೆ ಮತ್ತು ಕೊಚ್ಚಿಹೋಗುವ ಮರಳಿನ ಉಳಿಸುವಿಕೆ ಹೇಗೆ ಸಾಗುತ್ತದೆ ಎಂದು ವಿವರಿಸಿದರು.

ಈ ತಡೆಗೋಡೆಗಳಲ್ಲಿ ಪ್ರವಾಸಿಗರು ತೆರಳಿ ಸೆಲ್ಫಿಗಳನ್ನು ತೆಗೆಸಿಕೊಳ್ಳುತ್ತಿರುವುದು ಕಂಡುಬರುತ್ತಿದೆ. ಅಪಾಯದ ಎಚ್ಚರಿಕೆಯ ಫಲಕಗಳನ್ನು ಹಾಕಲಾಗಿದೆ.

ಹಜ್ ಯಾತ್ರೆಗೆ ಶುಭಹಾರೈಕೆಗಳು



ಬಿ. ಎ. ಹಂಝು
ಬಿ.ಎ.ಕೆ. ಕಂಪೌಂಡ್, ನಾವುಂದ

ಪವಿತ್ರ ಹಝ್ ಯಾತ್ರೆಗೆ ಹೊರಟಿರುವ ನಿಮಗೆ ಹೃತ್ಪೂರ್ವಕ ಶುಭ ಹಾರೈಕೆಗಳು. ಪ್ರಯಾಣ ನಿರಾಂತಕವಾಗಿ ನಡೆದು ನಿಮ್ಮ ಪವಿತ್ರ ಉದ್ದೇಶಗಳು ಈಡೇರಲಿ ಎಂದು ಪುಣ್ಯ ಯಾತ್ರೆಗೆ ಶುಭಾಶಯ ಕೋರುವ

* ಡಾ। ಎನ್. ಕೆ. ಬಿಲ್ಲವ ಮತ್ತು ಶುಭದಾ ಬಿಲ್ಲವ
ಶುಭದಾ ಶಿಕ್ಷಣ ಸಂಸ್ಥೆ, ಕಿರಿಮಂಜೇಶ್ವರ
* ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗ
ಶ್ರೀಗುರು ನಿತ್ಯಾನಂದ ಸೌಹಾರ್ದ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ನಿಯಮಿತ, ನಾವುಂದ,
* ಅಧ್ಯಕ್ಷರು ಮತ್ತು ಆಡಳಿತ ಮಂಡಳಿ ಸದಸ್ಯರು
ಶ್ರೀ ಬ್ರಹ್ಮ ಬೈದರ್ಕಳ ಗರಡಿ, ನಾವುಂದ
* ಅಧ್ಯಕ್ಷರು ಮತ್ತು ಪದಾಧಿಕಾರಿಗಳು
ಬಿಲ್ಲವ ಸಮಾಜ ಸೇವಾ ಸಂಘ (ರಿ), ನಾವುಂದ